1

# ಅಧಿಕಾರದ ಕುರಿತ ಅಧ್ಯಯನ ಯಾಕೆ?

ಈ ಅಧ್ಯಯನವನ್ನು ನಾವು ಪ್ರಾರಂಭಿಸುವಾಗ "ಕ್ಷಮಾಪಣೆಯು" ಕ್ರಮಾಂಕದಲ್ಲಿರುತ್ತದೆ. ಈ ದಿವಸಗಳಲ್ಲಿ ಈ ಪದವನ್ನು ಉಪಯೋಗಿಸಿರುವ ಮಾದರಿಯಲ್ಲಿರದೆ ಪೂರ್ವಕಾಲದಲ್ಲಿ ಉಪಯೋಗಿಸಿದಂತಿದೆ. ಗ್ರೀಕ್ ಪದದ *ಅಪಲೋಜಿಯ* ಎಂಬ ಪದದಿಂದ, ಆಂಗ್ಲ ಭಾಷೆಯ "ಅಪಾಲಜಿ" ಪದವು ಬಂದಿರುತ್ತದೆ, ಪ್ರತಿಪಾದವನ್ನು ಅಡಗಿಸುವ ಸಲುವಾಗಿ ಈ ಪದವನ್ನು ಬಳಕೆ ಮಾಡಲಾಗಿದೆ.

ಇದು ದೇವರ ಪ್ರತಿವಾದ ಮತ್ತು ವಿವರಣೆಯಾಗಿರುತ್ತದೆ, ದೇವರು ತನ್ನ ಒಡಂಬಡಿಕೆಯು ಸಮುದಾಯಕ್ಕು ಸಭೆಗೂ, ಮತ್ತು ಸಭೆಯಲ್ಲಿ ಜನರು ಹಾಡುವ ಕಾಪೆಲ್ಲ (ವಾದ್ಯಗಳು ಇಲ್ಲದೆ ಹಾಡುವುದು) ದೇವರ ದೃಷ್ಟಿಕೋನವಾಗಿದೆ, ಮತ್ತು ಆತನ ಆರಾಧನೆಯ ಕುರಿತಾದದ್ದು, ಆಗಿರುತ್ತದೆ. ಇದೇ ಒಂದು ಪ್ರತಿವಾದವಾಗಿರುತ್ತದೆ. ಈ ಪದವು ಪ್ರತಿಪಾದವನ್ನೇ ಒಳಗೊಂಡಿರುತ್ತದೆ. ನಾವು ಪ್ರತಿವಾದವನ್ನು ಪ್ರಾರಂಭಿಸುವಾಗ, ಇಲ್ಲಿ ಇನ್ನೊಂದು ವಿದಧ ಪ್ರತಿಪಾದವನ್ನು ಗಮನಿಸುತ್ತೇವೆ, ನಿರ್ದಿಷ್ಟವಾದ ಈ ಮುನ್ನುಡಿಯಲ್ಲಿ ನಾವು ಯಾಕೆ ಅಧಿಕಾರದ ಕುರಿತು ಹೆಚ್ಚಾಗಿ ಅಧ್ಯಯನಮಾಡಬೇಕು ಎಂದು ವಿವರಿಸುತ್ತೇನೆ. ಇನ್ನೂ ಇತರೆ ವಿಷಯಗಳಿಗೆ ಆಧ್ಯತೆಯ ಅಗತ್ಯವಿದ್ದರೂ ಈ ವಿಷಯಕ್ಕೆ ಯಾಕೆ ಸಮಯ ನೀಡಬೇಕು?

## ಆರಾಧನೆಗೆ ಅಧಿಕಾರವು ನೇರವಾದ ಸಂಬಂಧವನ್ನು ಹೊಂದಿರುತ್ತದೆ

ಈ ವಿಷಯವು ಆರಾಧನೆಗೆ ಸಂಬಂಧ ಪಟ್ಟಿರುವದರಿಂದ ಕ್ರೈಸ್ತರು ಇದರ ಅಧ್ಯಯನವನ್ನು ಮಾಡಬೇಕು, ಈ ವಿಷಯಕ್ಕೆ ಬೈಬಲ್ ವಿಶೇಷ ಗಮನ ನೀಡುತ್ತದೆ. ಆರಾಧನೆಯು ದೇವ ಜನರ ಪ್ರಾಥಮಿಕ ಹಕ್ಕಾಗಿರುತ್ತದೆ. ಆರಾಧನೆಯಲ್ಲಿ ನಾವು ದೇವರನ್ನು ದೃಷ್ಟಿಸಿ ಆಶೀರ್ವಾದ ಗಳಿಗೋಸ್ಕರ ಕೃತಜ್ಞರಾಗುತ್ತೇವೆ, ಮತ್ತು ಆರಾಧನೆಗೆ ಬರುವಾಗ, ನಾವೆಲ್ಲರೂ ಒಟ್ಟಾಗಿ ಸೇರಿ ಕೃತಜ್ಞ ಭಾವದವರಾಗುತ್ತೇವೆ. ಕ್ರೈಸ್ತರಾದ ನಾವು ಆರಾಧನೆಯ ಕುರಿತು ವ್ಯತ್ಯಾಸವನ್ನು ತೋರು ವುದಾದರೆ - ನಾವು ಒಟ್ಟಾಗಿ ಮಾಡುವಂಥ ಮುಖ್ಯ ಕಾರ್ಯವನ್ನು - ಮಾಡಲು ಪೂರ್ಣವಾಗಿ ಭಾಗಿಗಳಾಗದೆ ಇದ್ದರೆ ಒಟ್ಟಾಗಿ ಕಾರ್ಯನಿರ್ವಹಿಸುವ ಸೇವೆಗೆ ತೊಡಕು ಉಂಟಾಗುತ್ತದೆ. ಅಂತ ವ್ಯತ್ಯಾಸಗಳು ಸಭಾ ಸೇವೆಯಲ್ಲಿ ನಕರಾತ್ಮಕ ವ್ಯತ್ಯಾಸಗಳನ್ನು ಉಂಟು ಮಾಡುತ್ತದೆ (ಯೋಹಾನ 17:20, 21ನ್ನು ನೋಡಿರಿ).

ನಾವು ಗಮನಿಸಿ, ಹೇಗೂ, ಈ ವಿಧದ ವಿಭಜನೆಗಳು, ಕ್ರೈಸ್ತರು ವಿವಿಧವಾಗಿ ಅರ್ಥ ಮಾಡಿಕೊಳ್ಳುವ ಸ್ವಭಾವವನ್ನು ಸತ್ಯ ಆರಾಧನೆಯಲ್ಲಿ ಹೊಂದಿರುತ್ತವೆ. ದೇವರನ್ನು ಮೆಚ್ಚಿಸಲು ಯಾವ ರೀತಿಯಲ್ಲಿ ಆರಾಧಿಸಲಿ? ವಿಧಗಳು ಆರಾಧನೆಯಲ್ಲಿ ಅವಶ್ಯವೆ - ವಾದ್ಯಗಳು ಪ್ರಮುಖವೇ ಸಂಗೀತದ ಕ್ರಮಗಳು ಅವಶ್ಯವೆ? ಆರಾಧನೆಯಲ್ಲಿ ದೇವರು ನಮ್ಮ ಮನೋ ಭಾವವನ್ನು ನೋಡುವನೇ ಅಥವಾ ನಮ್ಮ ವಾದ್ಯದ ಕ್ರಮವನ್ನು ನೋಡುವನೇ? ನಮ್ಮ ಪಾಠಗಳು ಈ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

"ನಾವು ಮನೋಭಾವವನ್ನು ಮತ್ತು ವಿಧವನ್ನು ಅಭ್ಯಾಸಿಸುವ ಪ್ರಶ್ನೆಯನ್ನು ಕೇಳಿ ಕೊಳ್ಳೋಣವೇ?" ಇದು ಸರಿಯಾದ ಪ್ರಶ್ನೆಯೇ. ಮನೋಭಾವವು ಚಿಂತನೆ ಮಾಡಬೇಕಾದ ವಿಷಯವೇ; ಯಥಾರ್ಥತೆ ಇಲ್ಲದೆ, ಆರಾಧನ ಕ್ರಮವನ್ನು ಅನುಸರಿಸುವಂಥದ್ದನ್ನು ಗ್ರಂಥಗಳು ನಿರಾಕರಿಸುತ್ತವೆ. (ಆಮೋಸ್ 5:21-24 ನೋಡಿರಿ.) ಇನ್ನೊಂದೆಡೆ ಯಥಾರ್ಥತೆ ಇಲ್ಲದ ಈ ಜನರು ಪ್ರಾಯೋಜಿಸುವ ಕ್ರಮಗಳು ದೇವರಿಂದ ನೀಡಲಾಗಿದ್ದರೆ, ಆರಾಧನೆಯ ಕುರಿತಾಗಿ

ಬೈಬಲಿನಲ್ಲಿ ಅಧ್ಯಾಯನವನ್ನು ಮಾಡೋಣ. ನಮ್ಮ ಆರಾಧನೆಯಲ್ಲಿ, ದೇವರು ನೀಡುವ ವಿಧಿ ವಿಧಾನಗಳು ಪುರಾತನ ಚರಿತ್ರೆ ಹೊಂದಿರುತ್ತದೆ.

ದೇವರು ಉದ್ದೇಶ ಹೊಂದಿರುವ ವ್ಯಕ್ತಿಯಾಗಿರುವದರಿಂದ, ಒಂದೇ ವಿಧಾನದಲ್ಲಿ ಜನರು ಆತನನ್ನು ಆರಾಧಿಸಬೇಕೆಂಬ ಅಪ್ಪಣೆಯನ್ನು ನೀಡಿರುವನು. ಆದುದರಿಂದ, ಮನೋಭಾವವನ್ನು ಹಿಂಬಾಲಿಸದ ಆರಾಧನ ಕ್ರಮವನ್ನು ಸರಿಯೆಂದು ತಿಳಿದು, ವಿಧಾನ ರೂಪದಲ್ಲಿ ಮಾಡುವ ಆರಾಧನೆಯು ಪ್ರಮುಖವಲ್ಲ ಎಂಬುವುದು ಸರಿಯಲ್ಲವಷ್ಟೆ. ದೇವರು ನೀಡಿರುವ ಆಜ್ಞೆಯನ್ನು ಕ್ರೈಸ್ತರು ಗ್ರಹಿಸಲು ಕಷ್ಟಕರವಾಗ ಬಹುದು. ಕೆಲವು ಆಜ್ಞೆಗಳ ನಿರ್ದಿಷ್ಟವಾದ ಕಾರಣಗಳನ್ನು ದೇವರು ನೀಡಿರುವದಿಲ್ಲ. ಧರ್ಮೋಪದೇಶಕಾಂಡ 29:29, "ರಹಸ್ಯವಾದವುಗಳು ನಮ್ಮ ದೇವರಾದ ಕರ್ತನವು; ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮ ಮತ್ತು ನಮ್ಮ ಸಂತತಿಯವರ ಪಲಾಗಿರುವದರಿಂದ ನಾವು ಈ ಧರ್ಮಶಾಸ್ತ್ರ ನಿಯಮಗಳನ್ನು ಅನುಸರಿಸಿ ನಡೆಯಬೇಕಾದ ಹಂಗಿನಲ್ಲಿದ್ದೇವೆ." ದೇವರ ಆಲೋಚನೆಗಳು ಮತ್ತು ಮಾರ್ಗಗಳು ನಮ್ಮ ಗ್ರಹಿಕೆಗೆ ಸಿಲುಕವು. ಯೆಶಾಯ 55:8, 9,

> ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ, ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ.

ದೇವರು ನಿರ್ದಿಷ್ಟವಾದ ಕಾರಣಗಳನ್ನು ನಾವು ಅರ್ಥೈಸಲು ಅಥವಾ ಇಲ್ಲದಿರಲಿ, ಆತನು ಹೇಳಿರುವದನ್ನು ನಾವು ಸ್ವ ಇಷ್ಟದಿಂದ ಸ್ವೀಕರಿಸಬೇಕು. ಆತನ ಸ್ವಭಾವವು ಸತ್ಯವಾದದ್ದೆ, ಮತ್ತು ಆತನ ಬಯಕೆಯನ್ನು ನಾವು ಪಾಲಿಸುವುದಾದರೆ ಅದು ನಮಗೆ ಒಳ್ಳೆಯದೆ.

ದೇವರು ಅನೇಕ ಸಂಗತಿಗಳನ್ನು ಪ್ರಕಟಿಸಲು ಬಯಸಿದ್ದಾನೆ ಎಂದು ನಾವುಗಳು ನೆನಪುಮಾಡಿಕೊಳ್ಳಬೇಕು (1 ಕೊರಿಂಥ 2:6-13 ಈ ಕಾರ್ಯದ ಸಾರಾಂಶಕ್ಕಾಗಿ ನೋಡಿರಿ). ನಮ್ಮ ವಿವಿಧ ಮಟ್ಟದ ಆತ್ಮಿಕತೆಯಿಂದ ದೇವರ ಪ್ರಕಟನೆಗಳನ್ನು ಅರ್ಥೈಸಿಕೊಳ್ಳುತ್ತೇವೆ. ನಾವು ಆತನ ಅನುಯಾಯಿಗಳಾಗಿರುವದರಿಂದ ನಾವು ತಿಳುವಳಿಕೆಯಲ್ಲಿ ಅಭಿವೃದ್ಧಿ ಹೊಂದಲು ನಿರೀಕ್ಷಿಸಲಾಗಿದೆ.[1]

ದೇವರ ಆಜ್ಞೆಗಳನ್ನು ತಿಳಿದರೂ ಅಥವಾ ತಿಳಿಯದಿದ್ದರೂ, ಪಾಠವು ಮಾತ್ರ ಒಂದೇಯಾಗಿರುತ್ತದೆ. ಆತನ ಆಜ್ಞೆಗಳನ್ನು ಬದಲು ಮಾಡುವದಾಗಲೀ, ಅಲಕ್ಷಮಾಡುವದಾಗಲಿ ಎಂದಿಗೂ ಸಲ್ಲದು ಮತ್ತು ವಿಧಾನಗಳಿಂದ ಆರಾಧಿಸಬೇಕು ಎಂಬವರು ಸಹ ಇದರಲ್ಲಿ ಒಳಗೊಂಡಿದ್ದಾರೆ. *ದೇವರು ಬಯಸುವ ವಿಧಾನದಿಂದ ಆರಾಧಿಸುವದನ್ನು ಕುರಿತು ಸಾಕ್ಷ್ಯಾಧಾರಗಳು ಇರುವುದಾದರೆ, ಅದು ಆತನ ಒಡಂಬಡಿಕೆಯ ಜನರು (ಕಾಪೆಲ್ಲ) ವಾದ್ಯ ರಹಿತವಾದ ಹಾಡುಗಳನ್ನು ಹಾಡಬಹುದೇ ವಿನಃ ಇತರ ವಿಧಾನಗಳನ್ನು ಉಪಯೋಗಿಸಬಾರದು.*

## ಕಳೆದ ವರ್ಷಗಳಲ್ಲಿ ಅಧಿಕಾರವು ಹೆಚ್ಚು ಗಮನವನ್ನು ಸೆಳೆದಿರುವದಿಲ್ಲ

ಈ ಪಾಠದ ಅಧ್ಯಯನಕ್ಕೆ ಎರಡನೆಯ ಕಾರಣವು ಕಳೆದ ವರ್ಷಗಳಲ್ಲಿ ಹೆಚ್ಚು ಗಮನವನ್ನು ಸೆಳೆಯದಿರುವ ಸಂಗತಿಯಾಗಿರುತ್ತದೆ.[2] ಸಭಾ ಚರಿತ್ರೆಯ ಮುಖ್ಯ ನಾಯಕರುಗಳು ಈ ವಿಷಯಗಳನ್ನು ಚರ್ಚಿಸುತ್ತಾರೆ - ಕೇವಲ ಆಧಿ ಕ್ರೈಸ್ತರ ದಿನಗಳಲ್ಲಿ ಮಾತ್ರವಲ್ಲ, ಸುಧಾರಣೆಯ ದಿನಗಳಿಂದಲೂ ಸಹ ಈ ದಿವಸಗಳಿಗಿಂತಲೂ, ಆ ದಿವಸಗಳಲ್ಲಿ ಈ ವಿಷಯಗಳಿಗೆ ಹೆಚ್ಚು ಗಮನ ನೀಡಲಾಗಿತ್ತು.

ಏಕೆ ಇದು ಸತ್ಯವಾಗಿದೆ? ಇತರ ವಿಷಯಗಳಿಗೆ ಗಮನವು ಇರುವಾಗ, ಜನರು ಅಧಿಕಾರದ ಬಗ್ಗೆ ಮಾತನಾಡುತ್ತಿರುವದಿಲ್ಲ? ಅನೇಕ ಬರಹಗಾರರು, ಆದಿಯಿಂದಲೂ ಚರ್ಚೆ

ಮಾಡಲು ಇತರೆ ವಿಷಯಗಳು ಇಲ್ಲದೆ ಇರುವದರಿಂದ, ಈ ವಿಷಯ ಬರೆದರು ಎಂದು ನಿರ್ಣಯಿಸಬಹದೇ? ಈ ದಿನಗಳ ನಿರ್ಲಕ್ಷವು, ಗಂಭೀರ ಸಮಸ್ಯೆಗೆ ಸೂಚನೆಯಾಗಿದೆಯೇ? ದೇವರ ವಾಕ್ಯದ ಧ್ಯಾನದಲ್ಲಿ ಜನರು ಹೆಚ್ಚು ನಿರ್ಲಕ್ಷ ಹೊಂದಿದ್ದಾರೆಯೇ? ಪುರಾತನ ಕಾಲದ ಜನರು ಯಾವಾಗಲು ಸರಿಯಾದದ್ದನ್ನೆ ಮಾಡಿದರು ಎಂದು ನಾನು ಧೈರ್ಯವಾಗಿ ಹೇಳು ತ್ತೇನೆ. ಈ ದಿನದ ಜನರು ಅತಿ ವಿವೇಕಿಗಳಾಗಿರುವದರಿಂದ, ಆ ದಿನದ ಜನರ ಕ್ರಿಯೆಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಅವರ ಹೇಳಕೆಗಳು ಏಕೆ ಎಂದು ಹೇಳಲು ಸಾಧ್ಯವಿಲ್ಲ.

## ಆರಾಧನೆಯಲ್ಲಿ ಉಪಯೋಗವಾಗುವ ವಾಧ್ಯಗಳ ಕುರಿತ ಪ್ರಶ್ನೆಯನ್ನು ಅಧಿಕಾರವು ಉತ್ತರಿಸುತ್ತದೆ

ಈ ಅಧ್ಯಯನದ ಮೂರನೆಯ ಕಾರಣವು, ನಮ್ಮ ನಂಬಿಕೆಯ ಪ್ರತಿಪಾದವನ್ನು ಮಾಡುವ ಸಂಗತಿಯಾಗಿರುತ್ತದೆ. ಕ್ರಿಸ್ತನ ಸಭೆಯ ಜನರು ವಾದ್ಯಗಳಿಲ್ಲದ ಹಾಡುಗಳು (ಕಾಪೆಲ್ಲ) ದೇವರ ಆಜ್ಞೆಯಾಗಿರುತ್ತದೆ ಎಂದು ನಂಬುತ್ತಾರೆ. ಇಂಥ ವಿಷಯವನ್ನು ವಿವರಿಸುವದು ಸೌಜನ್ಯವಾ ಗಿದೆ, ಆದರೆ ಅದನ್ನು ಪ್ರತಿಪಾದಿಸುವ ಒತ್ತಡವು ಹೆಚ್ಚಾಗಿರುತ್ತದೆ: ನಂಬಿರುವದನ್ನು ಯಾಕೆ ನಂಬಿದ್ದೇವೆ. ಎಂದು ಬೈಬಲ್ ತಿಳಿಸುತ್ತದೆ. ಪೇತ್ರನ ಓದುಗರಿಗೆ ನೀಡಲಾದ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು: “ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆ ಲ್ಲರಿಗೆ ಉತ್ತರ ಹೇಳುವದಕ್ಕೆ ಯಾವಾಗಲು ಸಿದ್ಧವಾಗಿರಿ” (1 ಪೇತ್ರ 3:15ಬಿ).

ವಾದ್ಯವಿಲ್ಲದೆ ಹಾಡುವಂಥದ್ದನ್ನು ನಾವು ಯಾಕೆ ನಂಬುತ್ತೇವೆ, ಮತ್ತು ದೇವರು ಇದನ್ನು ಆರಾಧನೆಯಲ್ಲಿ, ದೇವ ಜನರು ಉಪಯೋಗಿಸಬೇಕು ಎಂಬುದನ್ನು ಅಥವಾ ಇದು ಒಂದು ಹವ್ಯಾಸ ಅಥವಾ ಆದ್ಯತೆ ಎಂದು ನಾವು ಪ್ರತಿಪಾದಿಸಬೇಕು. ಈ ನಂಬಿಕೆಗೆ ಸರಿಯಾಗಿ ನಾವು ಉತ್ತರಿಸದಿದ್ದರೆ, ನಮ್ಮ ಬಾಂದವ್ಯಕ್ಕೋಸ್ಕರವಾಗಿಯಾದರೂ, ವಾದ್ಯಗಳಿಂದ ಆರಾಧಿಸುವವರನ್ನು ಪ್ರತ್ಯೇಕಗೊಳಿಸಬಾರದು. ಇನ್ನೊಂದು ವಿಧದಲ್ಲಿ, ಇದು ದೇವರಿಗೆ ಗಂಭೀರವಾದ ಸಂಗತಿಯಾಗಿರುತ್ತದೆ, ಆದುದರಿಂದ ಇತರರಿಗೆ ಈ ಸತ್ಯವನ್ನು ತಿಳಿಸುವ ಜವಾಬ್ದಾರಿ ನಮ್ಮದಾಗಿದೆ.

ಈ ಪಾಠಗಳಲ್ಲಿ, ನಂಬಿಕೆಯ ಕ್ರಿಯೆಯಲ್ಲಿರಬೇಕಾದ ಅಧಿಕಾರದ ಪ್ರಾಮುಖ್ಯತೆಯನ್ನು ದೃಷ್ಟಿಸೋಣ, ಸಭೆಯಲ್ಲಿರತಕ್ಕ ಯೇಸುವಿನ ಅಧಿಕಾರದ ಕುರಿತು ಗಮನಹರಿಸೋಣ. ಆರಾಧನೆಯು ನಂಬಿಕೆಯ ಕ್ರಿಯೆಯಾಗಿರುವದರಿಂದ ಅದನ್ನು ಯೇಸುವಿನ ಅಧಿಕಾರ ಕ್ಕನುಗುಣವಾಗಿ ಮಾಡಬೇಕು.

ದೇವರ ವಾಕ್ಯದ ಮೇಲಿನ ಪ್ರೀತಿಯಿಂದ ಮತ್ತು ಜನರು ದೇವರನ್ನು ಮೆಚ್ಚಿಸಬೇಕೆಂಬ ಉದ್ದೇಶದಿಂದ ಈ ಪ್ರತಿಪಾದವನ್ನು ಮಂಡಿಸುತ್ತಿದ್ದೇನೆ. ಇಲ್ಲಿರುವಂತ ಸಾಕ್ಷಾಧಾರಗಳನ್ನು ನೀವುಗಳು ಯಥಾರ್ಥವಾಗಿ ಪರಿಶೀಲಿಸುವಿರೆಂದು ನಾನು ನೀರೀಕ್ಷಿಸಿದ್ದೇನೆ, ಇದರಲ್ಲಿ ಬಿಡುಗಡೆ ಕೊಡುವ ಸತ್ಯವು ಒಳಗೊಂಡಿರುತ್ತದೆ (ಯೋಹಾನ 8:32ನ್ನು ನೋಡಿರಿ). ಬೆರೇಯಾದವರ ಮಾದರಿಯನ್ನು ಅನುಸರಿಸಿರಿ ಎಂದು ನಿಮ್ಮನ್ನು ಉತ್ತೇಜಿಸುತ್ತೇನೆ (ಅಪೊಸ್ತಲರಕೃತ್ಯಗಳು 17:10, 11) ಮತ್ತು ನೀವೇ ವಾಕ್ಯಗಳನ್ನು ಪರಿಶೀಲಿಸಿರಿ.

---

ಟಿಪ್ಪಣಿಗಳು

[1]Growth and teaching are emphasized in Ephesians 4:11-16; Colossians 1:28, 29; Hebrews 5:11-14; and 2 Peter 3:18. [2]ಈ ದಿನದಅಧಿಕಾರದ ಕುರಿತಾದ ಅಂಶದ ಬಗ್ಗೆ ಹಲವು ಮತಗಳ ಗುಂಪುಗಳು ಪುನಾರಾಲೋಚಿಸುತ್ತಿದ್ದೇವೆ. ಉದಾಹರಣೆಯಾಗಿ ನೋಡಿ the webpage of the Reformed Presbyterian Church of North America. ಈ ಆ ವೇಪೇಜಿನಲ್ಲಿ (ವಿಶ್ವಾಸದ)

ಕುರಿತು ಹೀಗೆ ಹೇಳಲ್ಪಟ್ಟಿದೆ: **"ದೇವರನ್ನು ಹೇಗೆ ಆರಾಧಿಸಬೇಕೆಂಬುದು ದೇವರ ವಾಕ್ಯವು ಸ್ಪಷ್ಟವಾಗಿ ತಿಳಿಸುತ್ತದೆ ಎಂದು ನಾವು ನಂಬುತ್ತೇವೆ. ನಮ್ಮ ಆರಾಧನೆಯಲ್ಲಿ ದೇವರ ವಾಕ್ಯವನ್ನೆ ಓದುವುದು ಮತ್ತು ವಿವರಿಸುವುದು ಕೇಂದ್ರವಾಗಿದೆ"** (http://www.reformedpresbyterrian.org/conv_beliefs.html; Internet; accessed 26 July 2004).